**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮತಿ ಉಮಾಶ್ರೀಯವರು ನಿಯಮ 72 ರಡಿ ಪ್ರಸ್ತಾಪಿಸಿರುವ ಗಮನ ಸೆಳೆಯು ಸೂಚನೆಗೆ ಉತ್ತರ**

**ಸೂಚನೆ:** ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಮಹಿಳಾ ಸಂಘ ಮಹಿಳಾ ನೌಕರರ ಧ್ವನಿಯಾಗಿ ಮೊಟ್ಟ ಮೊದಲ ಭಾರಿಗೆ ರಾಜ್ಯ ದಲ್ಲಿ ದಿನಾಂಕ: 13.07.2023ರಂದು ಅಸ್ತಿತ್ವಕ್ಕೆ ಬಂದಿದ್ದು ಶೇ. 52 ಕ್ಕಿಂತ ಹೆಚ್ಚಿನ ಸಂಖ್ಯೆಯ ಮಹಿಳಾ ನೌಕರರ ಕ್ಷೇಮಾಭಿವೃದ್ಧಿ ಸಂಬಲೀಕರಣ ಹಾಗೂ ಸಂಘಟನೆಗಾಗಿ ಶ್ರಮಿಸುತ್ತಿದೆ. ಈ ಸಂಘಟನೆ ರಾಜ್ಯಾದ್ಯಂತ ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ಮಹಿಳಾ ಘಟಕಗಳನ್ನು ಈಗಾಗಲೇ ಸ್ಥಾಪಿಸಿದ್ದು ಕ್ರಿಯಾಶೀಲರಾಗಿ ಮಹಿಳೆಯರಿಂದ ಮಹಿಳೆಯರಿಗಾಗಿ ಮಹಿಳೆಯರಿಗೋಸ್ಕರ ಸರ್ಕಾರದ ಎಲ್ಲಾ ಇಲಾಖೆಗಳ ಎಲ್ಲಾ ವೃಂದಗಳ ಮಹಿಳೆಯರನ್ನು ಒಗ್ಗೂಡಿಸಿ ಸರ್ಕಾರದೊಂದಿಗೆ ಸರ್ಕಾರ ಯೋಜನೆಗಳ ಅನುಷ್ಠಾನದಲ್ಲಿ ತೊಡಗಿಸಿಕೊಂಡು ಸೂಕ್ತ ತರಬೇತಿ ಕಾರ್ಯಾಗಾರ ಹಾಗೂ ಅರಿವು ನೀಡುವ ಯೋಜನೆಗಳನ್ನು ಸಂಘದಿಂದ ಅನುಷ್ಠಾನಗೊಳಿಸಲಾಗುತ್ತಿದೆ.

ಈ ಸಂಘವು ತನ್ನ ಕಾರ್ಯ ಚಟುವಟಿಕೆಗಳನ್ನು ವಿಸ್ತರಿಸಲು ಸಂಘದ ಸದಸ್ಯರು ರಾಜ್ಯ ದ ಮೂಲೆ ಮೂಲೆಗಳಿಂದ ಕೇಂದ್ರಸ್ಥಾನ ಬೆಂಗಳೂರಿಗೆ ಭೇಟಿ ನೀಡಿ ತಮ್ಮ ಅಹವಾಲುಗಳನ್ನು ನೀಡಲು ಅನುಕೂಲವಾಗುವಂತೆ ಸಂಘಕ್ಕೆ ತನ್ನದೇ ಆದ ಕಟ್ಟಡ ವ್ಯವಸ್ಥೆ ಕಲ್ಪಿಸಲು ಹಾಗೂ ಸಂಘಕ್ಕೆ ಇರುವ ಮಾನ್ಯತೆ ನೀಡಲು ಇರುವ ನಿಯಮಗಳನ್ನು ಸಡಿಲಿಸಿ ವಿಶೇಷ ಪ್ರಕರಣವೆಂದು ಪರಿಗಣಿಸಿ ಸರ್ಕಾರದ ಮಾನ್ಯತೆ ನೀಡಿದಲ್ಲಿ ಮಹಿಳಾ ನೌಕರರ ಆತ್ಮ ಬಲವನ್ನು ಹೆಚ್ಚಿಸಿದಂತಾಗುತ್ತದೆ ಎಂಬ ನಿಟ್ಟಿನಲ್ಲಿ ಈ ಬಗ್ಗೆ ಸರ್ಕಾರದ ಗಮನ ಸೆಳೆಯ ಬಯಸುತ್ತೇನೆ.

**ಸರ್ಕಾರದ ಉತ್ತರ:**

ಕರ್ನಾಟಕ ನಾಗರಿಕ ಸೇವಾ (ಸೇವಾ ಸಂಘಗಳಿಗೆ ಮಾನ್ಯತೆ) ನಿಯಮಗಳು, 2015 ರಲ್ಲಿ ಸರ್ಕಾರಿ ನೌಕರರ ಸೇವಾ ಸಂಘಕ್ಕೆ ಸರ್ಕಾರದ ಮಾನ್ಯತೆ ನೀಡುವ ಬಗ್ಗೆ ಹಲವಾರು ಷರತ್ತು ನಿಬಂಧನೆಗಳನ್ನು ವಿಧಿಸಿದ್ದು, ಸದರಿ ಷರತ್ತುಗಳನ್ನು ಪೂರೈಸಿರುವ ಸಂಘಗಳಿಗೆ ಮಾನ್ಯತೆ ನೀಡಲು ಮತ್ತು ಮಾನ್ಯತೆ ನೀಡಿದ ನಂತರ ಸದರಿ ಮಾನ್ಯತೆಯನ್ನು ಮುಂದುವರೆಸಲು ಸಕ್ಷಮ ಪ್ರಾಧಿಕಾರಗಳನ್ನಾಗಿ ಸಚಿವಾಲಯದ ಆಯಾ ಆಡಳಿತ ಇಲಾಖೆಗಳಿಗೆ ಅಧಿಕಾರ ಪ್ರತ್ಯಾಯೋಜಿಸಲಾಗಿದೆ.

ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಮಹಿಳಾ ಸಂಘಕ್ಕೆ ಕರ್ನಾಟಕ ನಾಗರಿಕ ಸೇವಾ (ಸೇವಾ ಸಂಘಗಳ ಮಾನ್ಯತೆ) ನಿಯಮಗಳು, 2015 ರನ್ವಯ ಮಾನ್ಯತೆ ನೀಡಲು ನಿಯಮಗಳನ್ವಯ ಷರತ್ತು ಮತ್ತು ನಿಬಂಧನೆಗಳನ್ನು ಪೂರೈಸಿರುವ ಬಗ್ಗೆ ಪೂರಕ ದಾಖಲೆಗಳನ್ನು ಒದಗಿಸಬೇಕಾಗುತ್ತದೆ.

ಪ್ರಮುಖವಾಗಿ, ಕರ್ನಾಟಕ ನಾಗರಿಕ ಸೇವಾ (ಸೇವಾ ಸಂಘಗಳಿಗೆ ಮಾನ್ಯತೆ) ನಿಯಮಗಳು, 2015ರ ನಿಯಮ 2(b) ಯಲ್ಲಿ, ಒಂದು ಇಲಾಖೆಯ ಸಂಬಂಧಿಸಿದ ವೃಂದದಲ್ಲಿ ಶೇ. 50 ಕ್ಕೂ ಹೆಚ್ಚಿನ ನೌಕರರನ್ನು ಸದಸ್ಯರನ್ನಾಗಿ ಹೊಂದಿರಬೇಕು ಹಾಗೂ ಮಾನ್ಯತೆಯನ್ನು ಇಲಾಖೆಯಲ್ಲಿನ ಪ್ರತಿಯೊಂದು ವೃಂದದಲ್ಲಿನ ಒಂದು ಸೇವಾ ಸಂಘಕ್ಕಿಂತ ಹೆಚ್ಚಿನದಕ್ಕೆ ನೀಡುವಂತಿಲ್ಲ ಎಂದು ಉಪಬಂಧಿಸಲಾಗಿದೆ. ಮುಂದುವರೆದು, ಸದರಿ ನಿಯಮಗಳ 2 (ಸಿ) ನಲ್ಲಿ ಒಂದು ಸೇವಾ ಸಂಘವನ್ನು ಜಾತಿ, ಧರ್ಮ, ವಂಶ ಅಥವಾ ಇನ್ನಿತರ ಗುಂಪುಗಳ ಆಧಾರದ ಮೇಲೆ ರಚಿಸತಕ್ಕದ್ದಲ್ಲ ಎಂದು ಉಪಬಂಧಿಸಲಾಗಿದೆ.

ಕರ್ನಾಟಕ ನಾಗರಿಕ ಸೇವಾ (ಸೇವಾ ಸಂಘಗಳಿಗೆ ಮಾನ್ಯತೆ) ನಿಯಮಗಳು, 2015ರ ನಿಯಮಗಳನ್ನು ಸಡಿಲಿಸಿ ಇದುವರೆವಿಗೂ ಯಾವುದೇ ಸಂಘಕ್ಕೆ ಮಾನ್ಯತೆ ನೀಡಿರುವುದಿಲ್ಲ. ಆದುದರಿಂದ ನಿಯಮವನ್ನು ಸಡಿಲಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಮುಂದುವರೆದು, ಸದರಿ ಸಂಘಕ್ಕೆ ತನ್ನದೇ ಆದ ಕಛೇರಿ ವ್ಯವಸ್ಥೆ ಕಲ್ಪಿಸಲು ನಿಯಮಾನುಸಾರ ಪರಿಶೀಲಿಸುವಂತೆ ಲೋಕೋಪಯೋಗಿ ಇಲಾಖೆಗೆ ಸೂಚಿಸಲಾಗುವುದು.

(ಸಿದ್ದರಾಮಯ್ಯ)
ಮುಖ್ಯಮಂತ್ರಿಗಳು.

ಸಂಖ್ಯೆ: ಸಿಆಸುಇ 46 ಎಸ್‌ಸಿಆರ್ 2024